







# ಊಟಿ ರಾಮಕೃಷ್ಣ ಮಠದ ಪರಿಹಾರ ಕಾರ್ಯಗಳು

ಇತ್ತೀಚೆಗೆ ಕೋವಿಡ್-೧೯ ಸಾಂಕ್ರಾಮಿಕ ರೋಗವು ವ್ಯಾಪಕಗೊಂಡ ಹಿನ್ನೆಲೆಯಲ್ಲಿ ಊಟಿ ರಾಮಕೃಷ್ಣ ಮಠವು ಹಲವು ಪರಿಹಾರ ಕಾರ್ಯಗಳನ್ನು ಕೈಗೊಂಡಿದ್ದು, ವಿವರಗಳು ಹೀಗಿವೆ:

೧) ೨೦೨೧ರ ಮೇ ೩೧ರಂದು ಆಟೋ ಡ್ರೈವರ್, ಅಗಸರು, ಚಮ್ಮಾರರು ಹಾಗೂ ಸ್ಮಶಾನ ಕೆಲಸಗಾರರ ೭೦೦ ಕುಟುಂಬಗಳಿಗೆ **ದಿನಸಿ ಹಾಗೂ ಆರೋಗ್ಯವರ್ಧಕ ಕಿಟ್**‌ಗಳನ್ನು ವಿತರಿಸಲಾಯಿತು. ಇದರಲ್ಲಿ ಬೇಳೆ, ರವೆ, ಗೋಧಿಹಿಟ್ಟು, ಹೆಸರುಬೇಳೆ, ಬೀನ್ಸ್, ಶ್ಯಾವಿಗೆ, ಚಹಾಪುಡಿ, ರಸಂ ಪುಡಿ, ಅರಶಿನ ಪುಡಿ, ಮಸಾಲೆ, ಸೋಪ್, ಟೂತ್‌ಪೇಸ್ಟ್ ಇತ್ಯಾದಿಗಳಿದ್ದವು. ತಗಲಿದ ವೆಚ್ಚ ೭ ಲಕ್ಷ ರೂ.

೨) ಸ್ಮಶಾನ ಕೆಲಸಗಾರರಿಗೆ ೨೦೨೧ರ ಜೂನ್ ೪ ರಂದು ವಿವಿಧ **ಮೆಡಿಕಲ್ ಹಾಗೂ ಸುರಕ್ಷಾ ಕಿಟ್**‌ಗಳನ್ನು ವಿತರಿಸಲಾಯಿತು. ೧೫ ದಿನಗಳ ಬಳಕೆ ಬೇಕಾಗುವಷ್ಟು ಸಾಮಗ್ರಿಗಳು ಇದರಲ್ಲಿ ಒಳಗೊಂಡಿದ್ದವು. ೨೦೦೦ ಮಾಸ್ಕ್, ೧೦,೦೦೦ ಗ್ಲೌಸ್, ೭೦ ಪಿಪಿಇ ಕಿಟ್, ೩ ಫೈರ್ ಮಾಸ್ಕ್, ೧೫೦ ಮುಖ ರಕ್ಷಕಗಳು, ೧೫ ಲೀ. ಹ್ಯಾಂಡ್ ಸ್ಯಾನಿಟೈಸರ್, ೧೭೫ ಲೀ. ಫಿನೈಲ್, ೫೦ ಕಿಲೋ ಬ್ಲೀಚಿಂಗ್ ಪುಡಿ ಹಾಗೂ ನೀರಿನ ಪಂಪ್ ಇವನ್ನು ಈ ಮೂಲಕ ವಿತರಿಸಲಾಗಿದೆ. ಇದಕ್ಕೆ ತಗಲಿದ ವೆಚ್ಚ: ೭೨,೦೦೦ ರೂ.

೩) ಮೇ ೨೫ರಿಂದ ಜೂನ್ ೧೪ರ ವರೆಗೆ ೧೨,೧೭೧ ಮಂದಿ ಹೋಂ ಕ್ವಾರಂಟೈನ್‌ನಲ್ಲಿದ್ದವರಿಗೆ ಹಾಗೂ ಬೀದಿ ನಿವಾಸಿಗಳಿಗೆ **ಬೇಯಿಸಿದ ಆಹಾರದ ಪ್ಯಾಕೆಟ್**‌ಗಳನ್ನು ವಿತರಿಸಲಾಯಿತು. ಇದರಲ್ಲಿ ಸಾಂಬಾರ್ ರೈಸ್, ವೆಜಿಟೆಬಲ್ ರೈಸ್, ಟೊಮೆಟೊ ರೈಸ್ ಇತ್ಯಾದಿಗಳಿದ್ದವು. ವೆಚ್ಚ: ೧.೮೩ ಲಕ್ಷ ರೂ.

೪) ಜೂನ್ ೧೨ ರಂದು ಬೋಟ್‌ಹೌಸ್ ಶಾಪ್‌ನವರು, ಮೆಕ್ಯಾನಿಕ್‌ಗಳು, ಕ್ಷೌರಿಕರು, ಟೂರಿಸ್ಟ್ ಗೈಡ್‌ಗಳು, ಹೋಂ ಕ್ವಾರಂಟೈನ್‌ನಲ್ಲಿದ್ದ ಕುಟುಂಬಗಳು, ಚಹಾ ಅಂಗಡಿಯವರು ಇತ್ಯಾದಿ ವಿವಿಧ ೧೦೦೦ ಕುಟುಂಬಗಳಿಗೆ ೧೦೦೦ **ದಿನಸಿ ಕಿಟ್**‌ಗಳನ್ನು ವಿತರಿಸಲಾಯಿತು. ವೆಚ್ಚ: ೭.೫ ಲಕ್ಷ ರೂ.

೫) ಜೂನ್ ೨೯ರಂದು ಹೋಂ ಕ್ವಾರಂಟೈನ್‌ನಲ್ಲಿದ್ದ ೧೦ ಜನರಿಗೆ **ಕೋವಿಡ್ ಮೆಡಿಕಲ್ ಕಿಟ್**‌ಗಳನ್ನು ಹಂಚಲಾಯಿತು. ಇದರಲ್ಲಿ ಆಕ್ಸಿಮೀಟರ್, ಡಿಜಿಟಲ್ ಥರ್ಮೋಮೀಟರ್, ವಿಟಾಮಿನ್ ಮಾತ್ರೆಗಳು ಮಾಸ್ಕ್, ಸೋಪ್, ಸಾನಿಟೈಜರ್ ಇತ್ಯಾದಿಗಳಿದ್ದವು. ವೆಚ್ಚ: ೨೦,೦೦೦ ರೂ.

೬) ಜುಲೈ ೧ ರಿಂದ ೩ರ ವರೆಗೆ ೧೦೦೦ ಮಂದಿ ಬಡ ಮಕ್ಕಳಿಗೆ **ಪೋಷಕ ಆಹಾರಗಳ ಕಿಟ್** ವಿತರಿಸಲಾಯಿತು. ಇದರಲ್ಲಿ ಹಾಲಿನ ಪುಡಿ, ಹೀಲ್ ಮಿಕ್ಸ್ ಪುಡಿ, ಬಿಸ್ಕತ್ತು ಇತ್ಯಾದಿಗಳಿದ್ದವು. ವೆಚ್ಚ: ೨ ಲಕ್ಷ.

ಈ ಎಲ್ಲ ಕಾರ್ಯಗಳಿಗಾಗಿ ೨೧.೨೫ ಲಕ್ಷ ರೂ. ತಗಲಿದೆ.






Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020